85-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

ಮಾದರಿ ಉತ್ತರಗಳು

MODEL ANSWERS

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 2

S.S.L.C. MODEL QUESTION PAPER - 2 : 2026-27

ವಿಷಯ : ಸಮಾಜವಿಜ್ಞಾನ

Subject : SOCIAL SCIENCE

ವಿಷಯ ಸಂಕೇತ : 85-K **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 80] [Max. Marks : 80

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ: **8 X 1 = 8**

1. ಮೈಸೂರಿನ ನವರಾತ್ರಿ ಉತ್ಸವವನ್ನು ಶ್ರೀರಂಗಪಟ್ಟಣದಲ್ಲಿ ಪ್ರಾರಂಭಿಸಿದವರು.
   ಉತ್ತರ : (C) ರಾಜ ಒಡೆಯರ್ 1

2. ಶೀತಲ ಸಮರದ ಸಂದರ್ಭದಲ್ಲಿ ಭಾರತವು ಯಾವುದೇ ಶಕ್ತಿ ಬಣವನ್ನು ಸೇರದಿರಲು ನಿರ್ಧರಿಸಿತು. ಈ ನೀತಿಯು
   ಉತ್ತರ : (D) ಅಲಿಪ್ತ ನೀತಿ 1

3. ವಿಶ್ವ ಆರೋಗ್ಯ ಸಂಸ್ಥೆಯ ಕೇಂದ್ರ ಕಛೇರಿ ಇರುವ ಸ್ಥಳ
   ಉತ್ತರ : (C) ಜಿನೇವಾ 1

4. ಕೈಗಾ ಅಣು ವಿದ್ಯುತ್ ಸ್ಥಾವರದ ಯೋಜನೆಯ ವಿರುದ್ಧ ಚಳವಳಿ ಪ್ರಾರಂಭವಾಯಿತು, ಏಕೆಂದರೆ
   ಉತ್ತರ : (C) ಸುತ್ತಲಿನ ನಿತ್ಯಹರಿದ್ವರ್ಣ ಕಾಡುಗಳನ್ನು ಸಂರಕ್ಷಿಸಲು 1

5. ವಿಶೃತನು ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಯಾಗಿದ್ದು ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಲು ಆತನಿಗೆ ಸೂಕ್ತವಾದ ಬ್ಯಾಂಕ್‌ಖಾತೆಯ ವಿಧ ಯಾವುದೆಂದರೆ,

ಉತ್ತರ : {A} ಉಳಿತಾಯ ಖಾತೆ 1

6. ಪಶ್ಚಿಮಘಟ್ಟಗಳ ಪೂರ್ವ ಭಾಗವು ಪಶ್ಚಿಮ ಭಾಗಗಳಿಗಿಂತ ಕಡಿಮೆ ಮಳೆ ಪಡೆಯುವುದು ಏಕೆಂದರೆ
ಉತ್ತರ : ಇದು ಮಳೆ ನೆರಳಿನ ಪ್ರದೇಶವಾಗಿರುವುದರಿಂದ 1

7. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಸ್ವಾವಲಂಬಿಗಳನ್ನಾಗಿಸಲು ಜಾರಿಗೆ ತಂದ ಕಾರ್ಯಕ್ರಮ
ಉತ್ತರ : ಮಹಿಳಾ ಸ್ವ ಸಹಾಯ ಸಂಘಗಳು 1

8. ಚೇತನಳು ಬೆಂಗಳೂರಿನಿಂದ ಲಂಡನ್ ನಗರಕ್ಕೆ ಶೈಕ್ಷಣಿಕ ಪ್ರವಾಸ ಯೋಜನೆಯೊಂದನ್ನು ಹೊಂದಿದ್ದು ಆಕೆಯು ಅತ್ಯಂತ ವೇಗವಾಗಿ ಲಂಡನನ್ನು ತಲುಪಲು ಸೂಕ್ತವಾದ ಸಾರಿಗೆಯ ವಿಧಯಾವುದೆಂದರೆ

ಉತ್ತರ : (C) ವಾಯು ಸಾರಿಗೆ 1

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ: **8 X 1 = 8**

9. ಬ್ರಿಟಿಷ್ ಸರ್ಕಾರವು ಪೀಲ್ ಆಯೋಗವನ್ನು ಏಕೆ ಸ್ಥಾಪಿಸಿತು?
ಉತ್ತರ : ಮಿಲಿಟರಿ ವ್ಯವಸ್ಥೆಯ ಸುಧಾರಣೆಗೆ 1

10. ಎರಡನೇ ಮಹಾಯುದ್ಧವು ಶೀತಲ ಸಮರಕ್ಕೆ ಹೇಗೆ ನಾಂದಿಯಾಯಿತು?
ಉತ್ತರ : 1

- ಅಮೇರಿಕಾ ಮತ್ತು ರಷ್ಯಾಗಳ ನಡುವಿನ ಹೋರಾಟ
- ಸಮಾಜವಾದ ಮತ್ತು ಪ್ರಜಾಪ್ರಭುತ್ವಗಳ ಹರಡುವಿಕೆಯಲ್ಲಿನ ಪೈಪೋಟಿ.

(ಯಾವುದಾದರೂ ಒಂದು ಅಂಶ)

11. ವಿಶ್ವಸಂಸ್ಥೆಯ ಭದ್ರತಾ ಸಮಿತಿಯನ್ನು ವಿಶ್ವಸಂಸ್ಥೆಯ ಸಚಿವ ಸಂಪುಟ ಎಂದು ಏಕೆ ಕರೆಯಲಾಗುತ್ತದೆ?
ಉತ್ತರ : ಅತ್ಯಂತ ಬಲಶಾಲಿಯಾಗಿರುವುದರಿಂದ 1

12. ಸಾಮಾಜಿಕ ಸ್ಥರವಿನ್ಯಾಸ ಎಂದರೇನು?
ಉತ್ತರ : ಜಾತಿ, ಧರ್ಮ, ಲಿಂಗ, ಭಾಷೆಗಳ ತಳಹದಿಯ ಮೂಲಕ ಮೇಲು–ಕೀಳು ಬಡವ ಶ್ರೀಮಂತ ಗುಂಪುಗಳಲ್ಲಿ ವರ್ಗೀಕರಿಸುವುದು 1

13. ನರ್ಮದಾ ಬಚಾವೋ ಆಂದೋಲನ ಯಾವ ರಾಜ್ಯದಲ್ಲಿ ಪ್ರಾರಂಭವಾಯಿತು?
ಉತ್ತರ : ಗುಜರಾತ್ 1

14. ಇಸ್ರೋದ ಪ್ರಥಮ ಅಧ್ಯಕ್ಷರು ಯಾರು?
ಉತ್ತರ : ವಿಕ್ರಂ ಸಾರಾಭಾಯ್ 1

15. ಕೇಂದ್ರದ ಯೋಜನಾ ವೆಚ್ಚಗಳಡಿಯಲ್ಲಿನ ಸಾಮಾಜಿಕ ಸೇವೆಗಳಿಗೆ ಎರಡು ಉದಾಹರಣೆ ನೀಡಿರಿ.
ಉತ್ತರ : ಶಿಕ್ಷಣ , ಆರೋಗ್ಯ, ನೈರ್ಮಲ್ಯ, ಕುಟುಂಬ ಕಲ್ಯಾಣ, ಕುಡಿಯುವ ನೀರು, ವಸತಿ, ಸಮಾಜ ಕಲ್ಯಾಣ ಇತ್ಯಾದಿ

(ಯಾವುದಾದರೂ ಒಂದು ಅಂಶ) **1**

16. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸ್ಥಾಪನೆಯ ಮುಖ್ಯ ಉದ್ದೇಶವನ್ನು ತಿಳಿಸಿ.
ಉತ್ತರ : ಸಣ್ಣ ಕೈಗಾರಿಕೆಗಳ ಪ್ರಗತಿಗೆ ಸಮಗ್ರ ಆಡಳಿತಾತ್ಮಕ ಬೆಂಬಲ 1

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: **8 X 2 = 16**

17. ನಾಗರೀಕ ಸೇವಾ ಪರೀಕ್ಷೆಗಳ ಮೂರು ಹಂತಗಳು ಯಾವುವು?

ಉತ್ತರ :

- ಪೂರ್ವಭಾವಿ ಪರೀಕ್ಷೆ
- ಮುಖ್ಯ ಪರೀಕ್ಷೆ
- ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ) 2

ಅಥವಾ

ವಿಶ್ವಸಂಸ್ಥೆಯ ಪ್ರಧಾನ ಅಂಗಸಂಸ್ಥೆಗಳು ಯಾವುವು?

ಉತ್ತರ :

- ಸಾಮಾನ್ಯಸಭೆ
- ಭದ್ರತಾಸಮಿತಿ
- ಆರ್ಥಿಕ ಮತ್ತು ಸಾಮಾಜಿಕ ಸಮಿತಿ
- ವಿಶ್ವಸ್ಥ ಸಮಿತಿ
- ಸಂತರರಾಷ್ಟ್ರೀಯ ನ್ಯಾಯಾಲಯ
- ಸಚಿವಾಲಯ (½ X 4=2)

18. ಹೆಣ್ಣು ಭ್ರೂಣಹತ್ಯೆಗೆ ಕಾರಣಗಳನ್ನು ವಿವರಿಸಿ.

ಉತ್ತರ :

- ವರದಕ್ಷಿಣೆಯ ಭಾರ
- ಅನಕ್ಷರತೆ
- ತಾತ್ಸಾರ
- ಮಹಿಳಾ ವಿರೋಧಿ ಭಾವನೆಗಳು
- ಗಂಡು ಸಂತಾನದ ಬಯಕೆ

ಆಥವಾ

ಅಸ್ಪೃಶ್ಯತೆಯ ನಿವಾರಣೆಗೆ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ವಿವರಿಸಿ.

ಉತ್ತರ :

- ಸಂವಿಧಾನ ವಿಧಿ 17
- 1955 ರ ಅಸ್ಪೃಶ್ಯತಾ ಅಪರಾಧ ಕಾಯಿದೆ
- 1976 ರ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯಿದೆ
- ಸಾರ್ವತ್ರಿಕ ವಯಸ್ಕ ಮತದಾನ ಮತ್ತು ಸಮಾನತೆಯ ಹಕ್ಕುಗಳು
- ಉದ್ಯೋಗ, ರಾಜಕೀಯ, ಶಿಕ್ಷಣದಲ್ಲಿ ವಿಶೇಷ ಮೀಸಲಾತಿ
- ರಾಜ್ಯ ಸರ್ಕಾರಗಳಿಗೆ ವಿಶೇಷ ಜವಾಬ್ದಾರಿ. (½ X 4=2)

19. ಸುಗ್ಗಿ ಪೂರ್ವ ತಂತ್ರಜ್ಞಾನವು ಸುಗ್ಗಿ ನಂತರದ ತಂತ್ರಜ್ಞಾನಗಳ ನಡುವಿನ ಭಿನ್ನತೆಗಳನ್ನು ತಿಳಿಸಿ.

ಉತ್ತರ :

ಸುಗ್ಗಿ ಪೂರ್ವ ತಂತ್ರಜ್ಞಾನ	ಸುಗ್ಗಿ ನಂತರದ ತಂತ್ರಜ್ಞಾನ
ಅಧಿಕ ಇಳುವರಿ ನೀಡುವ ಬಿತ್ತನೆ ಬೀಜಗಳು	ಎ.ಪಿ.ಎಂ ಸಿ. ಗಳ ನಿರ್ಮಾಣ
ರಸಾಯಾನಿಕ ಗೊಬ್ಬರಗಳ ಬಳಕೆ	ಕನಿಷ್ಟ ಬೆಂಬಲ ಬೆಲೆ
ಕೀಟನಾಶಕ ಹಾಗೂ ಕ್ರಿಮಿನಾಶಕಗಳ ಬಳಕೆ	ಉಗ್ರಾಣಗಳ ನಿರ್ಮಾಣ
ನೀರಾವರಿ	ಕೃಷಿ ಉತ್ಪನ್ನಗಳ ಸಂಸ್ಕರಣೆ

ಪ್ರತಿ ವಿಭಾಗದಿಂದ ಎರಡು ಅಂಶಗಳು (½ X 4=2)

20. ಭಾರತದ ಗ್ರಾಹಕ ಸಂರಕ್ಷಣಾ ಕಾಯಿದೆಯು ಗ್ರಾಹಕರಿಗೆ ನೀಡಿದ ಯಾವುದಾದರು ನಾಲ್ಕು ಹಕ್ಕುಗಳನ್ನು ತಿಳಿಸಿ.

ಉತ್ತರ :

- ಮಾಹಿತಿಯ ಹಕ್ಕು
- ಆಯ್ಕೆಯ ಹಕ್ಕು
- ಸಂರಕ್ಷಣೆಯ ಹಕ್ಕು
- ಅಹವಾಲು ಹಕ್ಕು
- ಪರಿಹಾರದ ಹಕ್ಕು
- ಗ್ರಾಹಕ ಶಿಕ್ಷಣದ ಹಕ್ಕು

ಯಾವುದಾದರೂ ನಾಲ್ಕು ಅಂಶಗಳು (½ X 4=2)

21. ಸಹಾಯಕ ಸೈನ್ಯ ಪದ್ಧತಿಯು ದೇಶಿಯ ಆಡಳಿತಗಾರರನ್ನು ದುರ್ಬಲಗೊಳಿಸಿತು. ಹೇಗೆ?

ಉತ್ತರ :

- ದೇಶಿಯ ರಾಜರು ಬ್ರಟೀಷ್ ಸೈನ್ಯವನ್ನು ಹೊಂದಬೇಕಾಗಿತ್ತು
- ಸೈನ್ಯದ ಸಂಪೂರ್ಣ ವೆಚ್ಚವನ್ನು ಭರಿಸಬೇಕಿತ್ತು
- ಬ್ರಿಟೀಷ್ ರೆಸಿಡೆಂಟನ ನಿಯಂತ್ರಣದಲ್ಲಿ ಇರಬೇಕಾಗಿತ್ತು
- ಬೇರೆ ರಾಜ್ಯಗಳ ಜೊತೆಗಿನ ಒಪ್ಪಂದಗಳಿಗೆ ಅನುಮತಿ ಪಡೆಯಬೇಕಾಗಿತ್ತು
- ಅನುಮತಿ ಇಲ್ಲದೇ ಇತರ ಯೊರೋಪಿಯನ್ನರನ್ನು ನೇಮಿಸುವ ಹಾಗಿರಲಿಲ್ಲ

ಯಾವುದಾದರೂ ಎರಡು ಅಂಶಗಳು (½ X 4=2)

22. ತುಂಗಭದ್ರ ನದಿಕಣಿವೆ ಯೋಜನೆಯ ಉದ್ದೇಶಗಳನ್ನು ವಿವರಿಸಿ.

ಉತ್ತರ :

- ನೀರಾವರಿ
- ಮೀನುಗಾರಿಕೆ
- ಪ್ರವಾಹ ನಿಯಂತ್ರಣ
- ಆಲವಿದ್ಯುತ್ ಉತ್ಪಾದನೆ
- ಮನೋರಂಜನೆ
- ಪ್ರವಾಹ ನಿಯಂತ್ರಣ

ಯಾವುದಾದರೂ ಎರಡು ಅಂಶಗಳು (½ X 4=2)

23. ಖಾರೀಫ್ ಮತು ರಬಿ ಬೆಳೆ ಋತುಗಳ ನಡುವಿನ ವ್ಯತ್ಯಾಸಗಳೇನು?

ಉತ್ತರ :

ಖಾರೀಫ್ ಬೆಳೆ ಋತು	ರಬಿ ಬೆಳೆ ಋತು
ಮಾನ್ಸೂನ್ ಕಾಲದ ಬೆಳೆಗಳು	ಚಳಿಗಾಲದ ಬೆಳೆಗಳು
ಬಿತ್ತನೆ–ಜೂನ್ ನಿಂದ ಜುಲೈ	ಬಿತ್ತನೆ–ಅಕ್ಟೋಬರ್ ನಿಂದ ನವೆಂಬರ್
ಕೋಯ್ಲು–ಸೆಪ್ಟೆಂಬರ್ ನಿಂದ ಅಕ್ಟೋಬರ್	ಕೋಯ್ಲು–ಫೆಬ್ರವರಿಯಿಂದ ಮಾರ್ಚ್
ಬೆಳೆಗಳು– ಭತ್ತ, ರಾಗಿ, ಇತ್ಯಾದಿ	ಬೇಳೆಗಳು–ಗೋಧಿ

ಪ್ರತಿ ವೀಭಾಗದಿಂದ ಯಾವುದಾದರೂ ಎರಡು ಅಂಶಗಳು (½ X 4=2)

24. ಭಾರತದ ಒಕ್ಕೂಟದಲ್ಲಿ ಜಮ್ಮು ಕಾಶ್ಮೀರದ ವಿಲೀನವು ಇತರ ಸಂಸ್ಥಾನಗಳ ವೀಲಿನಕ್ಕಿಂತ ವಿಶಿಷ್ಟವಾದುದು. ಸಮರ್ಥಿಸಿ,

ಉತ್ತರ :

- ರಾಜ ಹರಿಸಿಂಗ್ ಸ್ವತಂತ್ರವಾಗಿ ಇರಲು ತಿರ್ಮಾನಿಸಿದ್ದನು
- ಪಾಕಿಸ್ತಾನ ಕಾಶ್ಮೀರದ ಮೇಲೆ ಧಾಳಿ ಮಾಡಿತು
- ಹರಿಸಿಂಗನು ಭಾರತದ ಒಕ್ಕೂಟ ಸೇರಲು ಸಹಿ ಮಾಡಿದನು
- ಜಮ್ಮು–ಕಾಶ್ಮೀರವಯ ಭಾರತದ ಒಕ್ಕೂಟದಲ್ಲಿ ಸೇರಿತು (½ X 4=2)

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಅಥವಾ ಅಂಶಗಳ್ಳಿ ಉತ್ತರಿಸಿ: 9 X 3 = 27

25. ಬಂಗಾಳದ ಮೇಲೆ ನಿಯಂತ್ರಣ ಹೊಂದಲು ಬಕ್ಸಾರ್ ಕದನವು ಬ್ರಿಟಿಷರಿಗೆ ನೆರವಾಯಿತು. ಸಮರ್ಥಿಸಿ.

ಉತ್ತರ :

- ಬ್ರಟೀಷರು ಮೀರ್ ಖಾಸಿಮನ ಒಕ್ಕೂಟ ಸೇನೆಯನ್ನು ಸೋಲಿಸಿದರು
- ಎರಡನೇ. ಷಾ ಆಲಂ ನು ಬ್ರಿಟೀಷರಿಗೆ ದಿವಾನಿ ಹಕ್ಕನ್ನು ಮಾನ್ಯ ಮಾಡಿದನು
- ಷೂಜ–ಉದ್–ದೌಲು ಯುದ್ದ ಪರಿಹಾರವನ್ನು ಪಾವತಿಸಿದನು
- ಬಂಗಾಳವು ಬ್ರಟೀಷರ ನಿಯಂತ್ರಣಕ್ಕೆ ಬಂದಿತು
- ಮೀರ್ ಜಾಫರನ ಮರಣದ ನಂತರ ಬಂಗಾಳದ ಆಡಳಿತವನ್ನು ಬ್ರಿಟೀಷರೇ ನಿಯಂತ್ರಿಸಿದರು
- ಯುದ್ದವು ಬ್ರಿಟೀಷರ ನಿಜವಾದ ಸಾಮರ್ಥ್ಯವನ್ನು ತೋರಿಸಿತು

ಅಥವಾ

1935 ರ ಭಾರತ ಸರ್ಕಾರದ ಶಾಸನವು ಭಾರತ ಸಂವಿಧಾನದ ರಚನೆಗೆ ತಳಹದಿಯಾಗಿತ್ತು.ಸಮರ್ಥಿಸಿ.

ಉತ್ತರ :

- ಒಕ್ಕೂಟ ವ್ಯವಸ್ಥೆಯು ಜರಿಗೆ ಬಂದಿತು
- ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆಯಾಯಿತು
- ದ್ವಿ ಸರ್ಕಾರವು ಕೇಂದ್ರದಲ್ಲಿ ಜಾರಿಯಾಯಿತು
- ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರ ರದ್ದು ಪಡಿಸಲಾಯಿತು
- ಫೆಡರಲ್ ನ್ಯಾಯಾಲಯ ಸ್ಥಾಪನೆಯಾಯಿತು. (½ X 6=3)

26. ಅರಣ್ಯಗಳು ನಮಗೆ ಮತ್ತು ಪರಿಸರಕ್ಕೆ ತುಂಬಾ ಉಪಯೋಗಕಾರಿಯಾಗಿವೆ. ವಿಶ್ಲೇಷಿಸಿ.

ಉತ್ತರ :

- ಆಹಾರ, ಮೇವು ಮತ್ತು ಶುದ್ದ ಗಾಳಿ
- ಮಳೆ
- ಮಣ್ಣಿನ ಸವೆತದ ನಿಯಂತ್ರಣ
- ಪ್ರಾಣಿ ಪಕ್ಷಿಗಳಿಗೆ ಆಶ್ರಯ
- ಗಿಡಮೂಲಿಕೆಗಳ ಲಭ್ಯತೆ
- ಪ್ರವಾಸದ ಅಭಿವೃದ್ದಿ
- ಉದ್ಯೋಗವಕಾಶಗಳ ನಿರ್ಮಾಣ
- ಪರಿಸರದಲ್ಲಿ ಸಮತೋಲನ

ಅಥವಾ

ಸಂಪರ್ಕದ ಉಪಯೋಗಗಳನ್ನು ವಿಶ್ಲೇಷಿಸಿ..

ಉತ್ತರ :

- ವಿವಿಧ ಘಟನೆಗಳ ಮಾಹಿತಿ ಲಭ್ಯತೆ
- ಸರ್ಕಾರದ ನೀತಿಗಳ ಬಗ್ಗೆ ಜನರಲ್ಲಿ ಜಾಗೃತಿ
- ಶೀಘ್ರ ಅಭಿವೃದ್ಧಿ ಸಾಧ್ಯತೆ
- ವ್ಯಾಪಾರ ವಾಣಿಜ್ಯದ ಮೂಲ ಅಗತ್ಯ
- ಏಕತೆ ಮತು ಭಾವೈಕ್ಯತೆಗಳ ರಕ್ಷಣೆ
- ಶಿಕ್ಷಣ ಮತ್ತು ಜ್ಞಾನದ ಪ್ರಸಾರ
- ಭಾವನೆಗಳ ವಿನಿಮಯ (½ X 6=3)

27. ಅಧಿಕಾರ ವಿಕೇಂದ್ರಿಕರಣವು ಗಾಂಧಿಜೀಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ಎತ್ತಿ ಹಿಡಿಯುತ್ತದೆ. ದೃಡೀಕರಿಸಿ.

ಉತ್ತರ :

- ಶೋಷಣೆಯನ್ನು ತಪ್ಪಿಸುವುದು
- ಮಾನವೀಯ ಸ್ವಾತಂತ್ರ ಎತ್ತಿ ಹಿಡಿಯುವುದು
- ಸ್ವಾವಲಂಬನೆ
- ಮಾನವೀಯ ಮೌಲ್ಯಗಳನ್ನು ಪೋಷಿಸುವುದು.
- ವಿಳಂಬವಿಲ್ಲದಂತೆ ಗ್ರಾಮೀಣ ಪ್ರದೇಶಗಳಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವುದು
- ಗ್ರಾಮೀಣ ಅಭಿವೃದ್ಧಿಗೆ ಸಹಕಾರ

ಅಥವಾ

ಕೇಂದ್ರ ಸರ್ಕಾರದವು ತೆರಿಗೆಗಳ ಜೊತೆಗೆ ತೆರಿಗೆಯೇತರ ಮೂಲಗಳಿಂದಲೂ ಆದಾಯ ಸಂಗ್ರಹಿಸುವುದು. ದೃಡೀಕರಿಸಿ.

ಉತ್ತರ :

- ದಂಡಗಳು ಮತ್ತು ಶುಲ್ಕಗಳು
- ಭಾರತೀಯ ರೈಲ್ವೆಯ ನಿವ್ವಳ ಆದಾಯ
- ಅಂಚೆ ಮತ್ತು ತಂತಿ ಇಲಾಖೆಯ ನಿವ್ವಳ ಆದಾಯ
- ನಾಣ್ಯಗಳನ್ನು ಟಂಕಿಸುವುದರಿಂದ ಸಿಗುವ ಆದಾಯ
- ರಿಸರ್ವ ಬ್ಯಾಂಕಿನ ಗಳಿಕೆ
- ಸಾರ್ವಜನಿಕ ವಲಯದ ಉದ್ದಿಮೆಗಳಿಂದ ಸಿಗುವ ಆದಾಯ (½ X 6=3)

28. ಅಂಚೆ ಕಛೇರಿಗಳು ಒದಗಿಸುವ ಹಣಕಾಸಿನ ಸೇವೆಗಳು ಯಾವುವು?

ಉತ್ತರ :

- ಉಳಿತಾಯ ಖಾತೆ
- ಆವರ್ತ ಠೇವಣಿ ಖಾತೆ
- ಕಿಸಾನ್ ವಿಕಾಸ ಪತ್ರ
- ಇಂದಿರಾ ವಿಕಾಸ ಪತ್ರ
- ರಾಷ್ಟ್ರೀಯ ಉಳಿತಾಯ ಪತ್ರ
- ಹಣ ವರ್ಗಾವಣೆ
- ಅಂಚೆ ಜೀವವಿಮೆ

- ನಿವೃತ್ತಿ ವೇತನ ಪಾವತಿ

ಅಥವಾ

ಉದ್ಯಮಶೀಲತೆಯ ಗುಣಲಕ್ಷಣಗಳಾವುವು?

ಉತ್ತರ :

- ಸೃಜನಶೀಲತೆ
- ಕ್ರೀಯಾಶೀಲತೆ
- ತಂಡ ಕಟ್ಟುವುದು
- ಸಮಸ್ಯೆಯ ಪರಿಹಾರ
- ನಷ್ಟಭರಿತಕ್ಕೆ ಸಿದ್ದರಾಗಿರುವುದು
- ಹೊಸ ಪದ್ದತಿಯನ್ನು ಚಿಂತಿಸುವುದು
- ಪ್ರಚೋದನೆಯ ಸಾದನೆ
- ಗುರಿಮುಟ್ಟುವಿಕೆ
- ನಿರ್ಧಾರಗಳನ್ನು ಕೈಗೊಳ್ಳುವುದು (½ X 6=3)

29. ಭಾರತೀಯ ಸಮಾಜವನ್ನು ಸುಧಾರಿಸುವಲ್ಲಿ ಸತ್ಯ ಶೋಧಕ ಸಮಾಜದ ಪಾತ್ರವು ಅವಿಸ್ಮರಣೀಯವಾದುದು. ಸಮರ್ಥಿಸಿ.

ಉತ್ತರ : 3

- ಶಿಕ್ಷಣಕ್ಕೆ ಪ್ರೋತ್ಸಾಹ
- ಅಸ್ಪೃಷ್ಯತೆಗೆ ವಿರೋಧ
- ಬಹು ಪತ್ನಿತ್ವಕ್ಕೆ ವಿರೋಧ
- ಮೂಢನಂಬಿಕೆಗಳಿಗೆ ವಿರೋಧ
- ಜಾತಿ ಪದ್ದತಿಗೆ ವಿರೋಧ
- ಮಾನವ ಹಕ್ಕುಗಳಿಗೆ ಪ್ರೋತ್ಸಾಹ
- ಸಮನತೆಗೆ ಆದ್ಯತೆ
- ವಿಧವಾ ವಿವಾಹಕ್ಕೆ ಪ್ರೋತ್ಸಾಹ
- ಮದ್ಯಪಾನ ನಿಷೇಧ (½ X 6=3)

30. ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮದ ಆರ್ಥಿಕ ಹಾಗೂ ಮಿಲಿಟರಿ ಕಾರಣಗಳನ್ನು ವಿವರಿಸಿ.

ಉತ್ತರ :

ಆರ್ಥಿಕ ಕಾರಣಗಳು

- ಕೈಗಾರಿಕೀಕರಣ
- ನಿರುದ್ಯೋಗ
- ಗೃಹ ಕೈಗಾರಿಕೆಗಳ ನಾಶ
- ಸಣ್ಣ ಕೈಗಾರಿಕೆಗಳ ಅವನತಿ
- ದೊಡ್ಡ ಕೈಗಾರಿಕೆಗಳಿಂದ ಪೈಪೋಟಿ
- ಭಾರತದ ಸರಕುಗಳ ಮೇಲೆ ರಫ್ತು ತೆರಿಗೆಯ ಹೇರಿಕೆ
- ಇನಾಂ ಕಮಿಷನ್

ಮಿಲಿಟರಿ ಕಾರಣಗಳು

- ಕಡಿಮೆ ಕೂಲಿ

- ಬಡ್ತಿಗಳ ನಿರಾಕರಣೆ
- ಭಾರತೀಯ ಹಾಗೂ ಯೂರೋಪಿನ ಸೈನಿಕರ ನಡುವೆ ತಾರತಮ್ಯ
- ಸೈನಿಕರ ಪರಿಸ್ಥಿತಿ ದುಸ್ತರವಾಗಿತ್ತು
- ಧಾರ್ಮಿಕ ವಿಚಾರಗಳಲ್ಲಿ ಹಸ್ತಕ್ಷೇಪ

ಪ್ರತಿ ವಿಭಾಗಗಳಿಂದ ಮೂರು ಅಂಶಗಳು (½ X 6=3)

31. ಭಾರತದ ವಿದೇಶಾಂಗ ನೀತಿಯ ಮೂಲಭೂತ ತತ್ವಗಳನ್ನು ವಿವರಿಸಿ

ಉತ್ತರ :

- ವಸಹಾತುಶಾಹಿಗೆ ವಿರೋಧ
- ಸಾಮ್ರಾಜ್ಯಶಾಹಿಗೆ ವಿರೋಧ
- ಜನಾಂಗೀಯ ತಾರತಮ್ಯಕ್ಕೆ ವಿರೋಧ
- ವರ್ಣಬೇಧ ನೀತಿಗೆ ವಿರೋಧ
- ಆಫ್ರಿಕಾ ಹಾಗೂ ಏಷ್ಯಾದ ದೇಶಗಳ ಪ್ರಗತಿಗೆ ಆದ್ಯತೆ
- ನಿಶಸ್ತ್ರೀಕರಣಕ್ಕೆ ಬೆಂಬಲ (½ X 6=3)
- ವಿಶ್ವಸಂಸ್ಥೆ ಹಾಗೂ ವಿಶ್ವಶಾಂತಿಗೆ ಬೆಂಬಲ

32. ಸಂಘಟಿತ ವಲಯದ ಕೆಲಸಗಾರರು ಅಸಂಘಟಿತ ವಲಯದ ಕೆಲಸಗಾರರಿಗಿಂತ ಹೇಗೆ ಭಿನ್ನವಾಗಿದ್ದಾರೆ?

ಉತ್ತರ :

ಸಂಘಟಿತ ವಲಯದ ಕೆಲಸಗಾರರು	ಅಸಂಘಟಿತ ವಲಯದ ಕೆಲಸಗಾರರು
ನಿಶ್ಚಿತ ವೇತನ	ಕಡಿಮೆ ಕೂಲಿ
ನಿಶ್ಚಿತ ವಿದ್ಯಾರ್ಹತೆ	ವಿದ್ಯಾರ್ಹತೆ ಇರುವುದಿಲ್ಲ
ವೈದ್ಯಕೀಯ ಸೌಲಭ್ಯಗಳು	ವೈದ್ಯಕೀಯ ಸೌಲಭ್ಯಗಳ ಕೊರತೆ
ಗಳಿಕೆ ರಜೆ ಸೌಲಭ್ಯಗಳು	ಗಳಿಕೆ ರಜೆ ಸೌಲಭ್ಯಗಳ ಕೊರತೆ
ನಿಯಮಗಳ ನಿಬಂಧನೆ	ನಿಯಮಗಳ ನಿಬಂಧನೆ ಇರುವುದಿಲ್ಲ
ಕೆಲಸಕ್ಕೆ ನಿಶ್ಚಿತ ವೇಳೆ	ಕೆಲಸಕ್ಕೆ ನಿಶ್ಚಿತ ವೇಳೆ ಇರುವುದಿಲ್ಲ

ಪ್ರತಿ ವಿಭಾಗಗಳಿಂದ ಮೂರು ಅಂಶಗಳು (½ X 6=3)

33. ಚಂಡಮಾರುತಗಳಿಂದ ಉಂಟಾಗುವ ಪರಿಣಾಮಗಳಾವುವು?

ಉತ್ತರ :

- ಪ್ರಾಣಹಾನಿ
- ಆಸ್ತಿ–ಪಾಸ್ತಿಗಳಿಗೆ ಹಾನಿ
- ರಸ್ತೆಗಳಿಗೆ ಹಾನಿ
- ವಿದ್ಯುತ್ ಸೌಲಭ್ಯದ ಪೂರೈಕೆಗೆ ಹಾನಿ
- ಸಾರಿಗೆ ಸಂಪರ್ಕಕ್ಕೆ ಹಾನಿ
- ಕುಡಿಯು ನೀರಿನ ಪೂರೈಕೆಯಲ್ಲಿ ವ್ಯತ್ಯಯ (½ X 6=3)
- ರೋಗ–ರುಜಿನಗಳ ಹರಡುವಿಕೆ

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: 4 X 4 = 16

34. ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯು ಮೈಸೂರನ್ನು ಮಾದರಿ ರಾಜ್ಯವನ್ನಾಗಿ ಮಾಡಿತು. ಸಮರ್ಥಿಸಿ.

ಉತ್ತರ :

- ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆ
- ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾರಂಭ
- ಕೈಗಾರಿಕೆಗಳ ಆರಂಭ
- ಉಚಿತ ಶಿಕ್ಷಣ
- ಹೆಣ್ಣು ಮಕ್ಕಳಿಗೆ ಶಿಕ್ಷಣ
- ತಾಂತ್ರಿಕ ಶಿಕ್ಷಣಕ್ಕೆ ಪ್ರೋತ್ಸಾಹ
- ವಿದೇಶಗಳಲ್ಲಿ ಉನ್ನತ ವ್ಯಾಸಾಂಗಕ್ಕೆ ವಿದ್ಯಾರ್ಥಿವೇತನಗಳು
- ಲಲಿತಕಲೆಗಳ ಪ್ರೋತಸಾಹ
- ಕೃಷಿಗೆ ಪ್ರೋತ್ಸಾಹ

ಅಥವಾ

ಇ. ವಿ. ರಾಮಸ್ವಾಮಿ ನಾಯ್ಕರ್‌ರವರು ಸಮಾನತೆಯನ್ನು ಎತ್ತಿಹಿಡಿದ ಸಾಮಜ ಸುಧಾರಕರು. ಸಮರ್ಥಿಸಿ.

ಉತ್ತರ :

- ಶಿಕ್ಷಣಕ್ಕೆ ಪ್ರೋತ್ಸಾಹ
- ಬಹು ಪತ್ನಿತ್ವಕ್ಕೆ ವಿರೋಧ
- ಮೂಢನಂಬಿಕೆಗಳಿಗೆ ವಿರೋಧ
- ಜಾತಿ ಪದ್ಧತಿಗೆ ವಿರೋಧ
- ಬ್ರಾಹ್ಮಣೇತ್ತರ ವರ್ಗದವರ ಮೀಸಲಾತಿಗೆ ಹೋರಾಟ
- ವೈಕೋಂ ಸತ್ಯಾಗ್ರಹದಲ್ಲಿ ಭಾಗಿ
- ಆತ್ಮ–ಗೌರವ ಚಳವಳಿಯ ಆರಂಭ
- ವಿಧವಾ ವಿವಾಹಕ್ಕೆ ಪ್ರೋತ್ಸಾಹ (½ X 8=4)

35. ಡೆಕ್ಕನ್ ಟ್ರಾಪ್ ವಲಯದಲ್ಲಿ ಪ್ರಧಾನವಾಗಿ ಕಂಡುಬರುವ ಮಣ್ಣಿನ ಗುಣಲಕ್ಷಣಗಳಾವುವು?

ಉತ್ತರ :

- ರೆಗೂರ್ ಮಣ್ಣು ಎಂದು ಕರೆಯಲ್ಪಡುವುದು
- ಹತ್ತಿ ಬೆಳೆಗೆ ಸೂಕ್ತವಾದುದು
- ಅಗ್ನಿ ಶಿಲೆಗಳ ಶಿಥಿಲೀಕರಣದಿಂದ ರಚನೆ
- ಜೇಡಿಯ ಅಧಿಕ ಕಣಗಳಿಂದ ಕೂಡಿರುವುದು
- ಫಲವತ್ತಾಗಿದ್ದು ತೇವಾಂಶವನ್ನು ದೀರ್ಘಕಾಲದವರೆಗೆ ಹಿಡಿದಿಟ್ಟುಕೊಳ್ಳುವುದು
- ಹೆಚ್ಚಿನ ಸುಣ್ಣದ ಅಂಶ
- ಹೆಚ್ಚಿನ ಮೆಗ್ನೀಷೀಯಂ ಕಾರ್ಬೋನೇಟ್‌ಗಳು
- ಒಣ ಬೇಸಾಯಕ್ಕೆ ಸೂಕ್ತವಾದುದು.

ಅಥವಾ

ಭಾರತದಲ್ಲಿ ಸಕ್ಕರೆ ಕೈಗಾರಿಕೆಗಳ ಸ್ಥಾನಿಕರಣವು ಅನೇಕ ಅಂಶಗಳಿಂದ ಪ್ರಭಾವಿಸಲ್ಪಟ್ಟಿದೆ. ಸಮರ್ಥಿಸಿ.

ಉತ್ತರ :

- ಕಚ್ಚಾ ಸಾಮಾಗ್ರಿಗಳ ಲಭ್ಯತೆ
- ನೀರಿನ ಲಭ್ಯತೆ

- ಶಕ್ತಿ ಸಂಪನ್ಮೂಲಗಳ ಲಭ್ಯತೆ
- ಸಾರಿಗೆ ಸೌಲಭ್ಯ
- ಮಾರುಕಟ್ಟೆಯ ಲಭ್ಯತೆ
- ಸರ್ಕಾರದ ನೀತಿಗಳು
- ಕಾರ್ಮಿಕರ ಲಭ್ಯತೆ
- ಬಂದರುಗಲ ಸೌಲಭ್ಯ
- ಹಣಕಾಸಿನ ಲಭ್ಯತೆ (½ X 8=4)

36. ಭರತದ ಪ್ರಧಾನಮಂತ್ರಿಯಾಗಿ ನೆಹರುರವರ ಕೊಡುಗೆಗಳನ್ನು ವಿವರಿಸಿ,

ಉತ್ತರ :

- ಕೈಗಾರಿಕೀಕರಣದ ಶಿಲ್ಪಿ
- ಸಂಸ್ಥಾನಗಲ ವಿಲಿನೀಕರಣ
- ಭಾಷಾವಾರು ಪ್ರಾಂತ್ಯಗಳ ರಚನೆ
- ಪ್ರಜಾಪ್ರಭುತ್ವಕ್ಕೆ ಅವಕಾಶ
- ಮಿಶ್ರ ಆರ್ಥಿಕ ವ್ಯವಸ್ಥೆ
- ಪಂಚವಾರ್ಷಿಕ ಯೋಜನೆಗಳು
- ಅಲಿಪ್ತ ನೀತಿ
- ಶಾಂತಿ ಮತ್ತು ಸಾಮರಸ್ಯ (½ X 8=4)

37. ಜನಸಂಖ್ಯಾ ಸ್ಪೋಟದಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸಿ.

ಉತ್ತರ :

- ನಿರುದ್ಯೋಗ
- ಬಡತನ
- ವಸತಿ ಸಮಸ್ಯೆ
- ಸಾರಿಗೆ ಸಮಸ್ಯೆ
- ಕುಡಿಯುವ ನೀರಿನ ಕೊರತೆ
- ಸಂಚಾರ ದಟ್ಟಣೆಯ ಸಮಸ್ಯೆ
- ಮೂಲ ಸೌಕರ್ಯಗಳ ಕೊರತೆ
- ಪರಿಸರ ಮಾಲಿನ್ಯ (½ X 8=4)
- ಶಿಕ್ಷಣದ ಕೊರತೆ

VI.38. ನಿಮಗೆ ನೀಡಲಾಗಿರುವ ಭಾರತದ ನಕ್ಷೆಯಲ್ಲಿ ಯಾವುದಾದರೂ ಐದು ಸ್ಥಳಗಳನ್ನು ಗುರುತಿಸಿ: 5 X 1 = 5

a) $82^0 30^1$ ಪೂರ್ವ ರೇಖಾಂಶ
b) ಕೊಂಕಣ ತೀರ
c) ತಾರಪುರ
d) ನವ ಮಂಗಳೂರು ಬಂದರು
e) ನರೋರ
f) ಭಾಕ್ರ–ನಂಗಲ್

g) ಮಹರ್ಷಿ ವಾಲ್ಮೀಕಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

h) ಭಾರತದ ಸಿಲಿಕಾನ್ ಕಣಿವೆ

i) ಗಂಗಾನಗರ

j) ಇಂದಿರಾ ಪಾಯಿಂಟ್



ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ

(ಪ್ರಶ್ನೆ ಸಂಖ್ಯೆ 38 ಕ್ಕೆ ಬದಲಾಗಿ)

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳಾವುವು?

ಉತ್ತರ : 5

- ನೀರಿನ ಪೂರೈಕೆ
- ವಿದ್ಯುತ್ತಿನ ಪೂರೈಕೆ
- ಮೀನುಗಾರಿಕೆ
- ಮನೋರಂಜನೆ
- ನೀರಾವರಿ
- ಪ್ರವಾಹ ನಿಯಂತ್ರಣ
- ಮಣ್ಣಿನ ಸವಕಳಿಯ ನಿಯಂತ್ರಣ
- ಜಲಸಾರಿಗೆ
- ಅರಣ್ಯ ಸಂಪತ್ತಿನ ಸೃಷ್ಟಿ

ಅಥವಾ

ಹಿಮಾಲಯ ಪರ್ವತ ಪ್ರದೇಶಗಳ ಪ್ರಾಮುಖ್ಯತೆಯನ್ನು ತಿಳಿಸಿ.

- ದೇಶಕ್ಕೆ ರಕ್ಷಣೆ
- ಖನಿಜ ಸಂಪನ್ಮೂಲಗಳ ಆಗರ
- ಪ್ರವಾಸೋದ್ಯಮ
- ಅರಣ್ಯ ಸಂಪತ್ತು
- ಶೀತ ಮಾರತಗಳಿಗೆ ತಡೆ
- ನದಿಗಳ ಜನ್ಮಸ್ಥಾನ

- ಪ್ರಾಣಿ ಹಾಗೂ ಸಸ್ಯ ಸಂಪತ್ತಿಗೆ ಆಶ್ರಯ
- ಧಾರ್ಮಿಕ ಪುಣ್ಯಕ್ಷೇತ್ರಗಳು
- ಭಾರಥಿಯರ ಜನಜೀವನದ ಮೇಲೆ ಪ್ರಭಾವ